# ಹೀಗೂ ಒಂದು ಕಾರಣ

■ ವಸುಮತಿ ಉಡುಪ
ಕಲೆ: ಈಶ್ವರ ಬಡಿಗೇರ್



ಕೆಲಕೆಲವು ಸಂದರ್ಭಗಳಲ್ಲಿ, ಕೆಲಕೆಲವು ನಿರ್ಣಯಗಳಿಗೆ, ಹೇಳಿಕೊಳ್ಳಬಹುದಾದ ಕಾರಣಗಳಿರುವಂತೆ ನುಂಗಿಕೊಳ್ಳಬೇಕಾದ ಕಾರಣಗಳೂ ಇರುತ್ತವೆ. ಬಾಯ್ಬಿಟ್ಟು ಹೇಳಬಾರದು ಅಂತೇನಿಲ್ಲ. ಆದರೆ ಹೇಳಲು ಏನೋ ಮುಜುಗರ. ಏನೋ ಅಪಶಕುನದ ಶಂಕೆ. ಸಂಬಂಧಿಸಿದವರು ತಾವಾಗಿ ಅದನ್ನು ಅರ್ಥ ಮಾಡಿಕೊಳ್ಳಲಿ ಎನ್ನುವ ಬಯಕೆ. ಹಾಗಾಗದಿದ್ದಾಗ ಇರಿಸುಮುರಿಸು.

ಸಂತೋಷ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಕೆಲಸ ಮಾಡುತ್ತಾ ಕೈತುಂಬಾ ಸಂಬಳ ಪಡೆಯುವ ಎಂಜಿನಿಯರ್. ಮದುವೆಯಾಗಿ ಇಬ್ಬರು ಮಕ್ಕಳಾದ ನಂತರವೂ ಅಪ್ಪ, ಅಮ್ಮನ ಜೊತೆ ಹೊಂದಿಕೊಂಡು ಜೊತೆಗಿರುವ ಅವರ ತುಂಬು ಸಂಸಾರ ಕಂಡರೆ ಕೆಲವರಿಗೆ ಕರುಬು. ಕೆಲವರಿಗೆ ಮೆಚ್ಚುಗೆ. ಕೆಲವರಿಗೆ ಚೋದ್ಯ. ಸಂತೋಷ ಹುಟ್ಟಿ ಬೆಳೆದ ಆ ಮನೆ ಮಧ್ಯಮವರ್ಗದವರು ವಾಸಿಸುವ ಒಂದು ಬಡಾವಣೆಯಲ್ಲಿ, ಹಿಂದೊಂದು ಕಾಲದಲ್ಲಿ, ಅವರಪ್ಪ ಕಟ್ಟಿಸಿದ್ದು. ಆ ಮನೆಗೆ ಸಂತೋಷನಷ್ಟೇ ವಯಸ್ಸು. ಹೆಚ್ಚೂ ಕಡಿಮೆ ಮೂವತ್ತೈದು. 'ಒಳ್ಳೆಯ ಗಳಿಗೆಯಲ್ಲಿ ಮಗ ಹುಟ್ಟಿದಾನೆ. ನಮ್ಮದು ಅಂತ ಒಂದು ಸ್ವಂತ ಮನೆ ಮಾಡಿಕೊಳ್ಳೋ ಅದೃಷ್ಟ ಕೊನೆಗೂ ಬಂತು' ಎಂದು ಸಂತೋಷನ ಅಮ್ಮ ಸ್ವರ್ಗ ಕೈಗೆಟುಕಿದಂತೆ ಸಂಭ್ರಮಿಸಿದ್ದಳಂತೆ.

'ಆ ಕಾಲದಲ್ಲಿ ಈ ಸೈಟಿಗೆ ಎಷ್ಟು ಕೊಟ್ಟಿದ್ದೆ ಗೊತ್ತಾ? ಹೇಳಿದ್ರೆ ನಂಬಲ್ಲ ನೀನು. ಬರೀ ಅರವತ್ತು ಸಾವಿರ ಕಣೋ. ಲಕ್ಷ ಅಲ್ಲ, ಸಾವಿರ. ಸ್ವಂತ ಮನೆ ಅಂತ ನಿಮ್ಮಮ್ಮ ಹಗಲೂ ರಾತ್ರಿ ಕನವರಿಸ್ತಿದ್ಲು. ಯಾಕೆ ಗೊತ್ತಾ?' ಉಮೇದು ತುಂಬಿ ತುಳುಕುವಷ್ಟಾದಾಗ ಅಪ್ಪ ಮಗನೊಡನೆ ಹೀಗೆ ವಾರ್ತಾಲಾಪ ನಡೆಸುತ್ತಿದ್ದುದಿತ್ತು. ಅಪ್ಪನಿಗೆ ನಿರಾಸೆ ಮಾಡುವ ಮಗ ಅಲ್ಲ ಸಂತೋಷ. ಅಪ್ಪ ಹೇಳುತ್ತಿರುವುದನ್ನು ಹೊಸದಾಗಿ ಕೇಳಿಸಿಕೊಳ್ಳುತ್ತಿರುವವನಂತೆ ಆಲೈಸುತ್ತಿದ್ದ. ಅಪ್ಪ ಅದೆಷ್ಟು ಸಲ ಈ ಮಾತನ್ನು ಪುನರುಚ್ಚರಿಸುತ್ತಿದ್ದರು, ಉಚ್ಚರಿಸುತ್ತಿದ್ದಾರೆ ಎಂಬುದು ಅವರಿಗೆ ನೆನಪಿಲ್ಲ. ಹೊಸದಾಗಿ ತಾನು ಈ ಮಾತು ಹೇಳುತ್ತಿದ್ದೇನೆ ಎಂದು ಅವರಿಗೆ ನಂಬುಗೆ. ಅಪ್ಪ ಅದದೇ ಪದಗಳನ್ನು, ಅದದೇ ವಾಕ್ಯಗಳನ್ನು, ಅದದೇ ಧಾಟಿಯಲ್ಲಿ ಮತ್ತೊಮ್ಮೆ ವರ್ಣಿಸತೊಡಗುತ್ತಾರೆ ಎಂದು ಗೊತ್ತಿದ್ದರೂ ಸಂತೋಷ ಅವರ ಮಾತಿಗೆ ಅಡ್ಡ ಬಾಯಿ ಹಾಕುತ್ತಿರಲಿಲ್ಲ. ಗಟ್ಟಿ ಕೇಳಿದರೆ ಅಪ್ಪ ಮುಂದೆ ಏನೇನು ಹೇಳುತ್ತಾರೆ ಎಂದು ಅವನೇ ಹೇಳಿಬಿಡಬಲ್ಲ. ಕೇಳಿ ಕೇಳಿ ಅದು ಬಾಯಿಪಾಠ ಆಗಿದೆ ಅವನಿಗೆ. ಅವನ ಚಿಕ್ಕಿ, ಅಂದರೆ ಅಮ್ಮನ ತಂಗಿ, ಮನೆ ಕಟ್ಟಿಸಿ ವಿಜೃಂಭಣೆಯಿಂದ ಗೃಹಪ್ರವೇಶ ಮಾಡಿದ್ದೇ ಮಾಡಿದ್ದು, ಇತ್ತ ಇವನ ಅಮ್ಮನಿಗೆ ಹೊಟ್ಟೆಬೇನೆ ಶುರುವಾಗಿಬಿಟ್ಟಿತು.

ಅದಕ್ಕೂ ಒಂದು ಕಾರಣ ಇದೆ. ಅವಳ ಅಮ್ಮ, ಕಿರಿ ಮಗಳ ಮನೆಒಕ್ಕಲಿನ ಸಂದರ್ಭದಲ್ಲಿ, ಹೀಗೇ ಮಾತಿಗೆ ಹೇಳಿದ್ದರಂತೆ, 'ನೀವೂ ಒಂದು ಸ್ವಂತ ಮನೆ ಮಾಡ್ಕಂಬಿಡಿ. ಮಕ್ಕಳು ಬೆಳೀತಾ ಹೋದ ಹಾಗೆ ಖರ್ಚು ಹೆಚ್ಚಾಗುತ್ತಾ ಹೋಗುತ್ತೇ ವಿನಾ ಕಡಿಮೆಯಾಗಲ್ಲ...'

ಸಂತೋಷನ ಅಮ್ಮನ ತಲೆಯಲ್ಲಿ ಹುಳು ಹೊಕ್ಕುಬಿಟ್ಟಿತು. ತಲೆ ಕೊರೆಯಲು ಶುರುವಾಯ್ತು. ಒಡಹುಟ್ಟಿದ ಅಕ್ಕ, ತಂಗಿಯರ ಮಧ್ಯೆ ಮುಸುಕಿನೊಳಗಿನ ಗುದ್ದಿನ ಹಾಗೆ ಇಂಥದ್ದೊಂದು ಪೈಪೋಟಿ ಇರುವುದು ಹೆಚ್ಚಿನ ಮನೆಗಳಲ್ಲಿ ಕಂಡುಬರುವ ವಾಸ್ತವ. ಮೇಲ್ನೋಟಕ್ಕೆ ತೋರಿಸಿಕೊಳ್ಳದಿದ್ದರೂ, ಒಬ್ಬಳ ಮೇಲ್ಮೆಯನ್ನು ಮತ್ತೊಬ್ಬಳು